**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 08-07-2026 ರಂದು ಬೊಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜೆ ಎಂ ಆರ್ ನ್ಯಾಯವಾದಿರವರಿಂದಃ**

ದಿನಾಂಕ 09-05-2022 ರ ಸಿಟಿ ಮುನ್ಸಿಪಲ್ ಕೌನ್ಸಿಲ್ ನಗರಸಭೆ ಕಾರ್ಯಾಲಯ ಇದರ ನೋಟಿಸನ್ನು ನಿಪಿ-1 ಎಂದು, ದಿನಾಂಕ 29-12-2022 ರ ನೋಟಿಸನ್ನು ನಿಪಿ-2 ಎಂದು , ಅದಕ್ಕೆ ಸಂಬಂಧಿಸಿದ ಅಂಚೆ ಚೀಟಿಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು, ದಿನಾಂಕ 20-02-2023 ರ ಭಾಗ್ಯೋದಯ ಅಪಾರ್ಟಮೆಂಟ ಇವರು ನೀಡಿದ ಲೀಗಲ್ ನೋಟಿಸನ್ನು ನಿಪಿ-6 ಎಂದು , ಸರ್ವೆ ನಂಬ್ರ 475/1 ಬಿ ಇದರ ಪಹಣಿ ಪತ್ರಿಕೆಯನ್ನು ನಿಪಿ-7 ಎಂದು , 1 ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8, ಸಾಕ್ಷಿಯು 8 ಪೋಟೊಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 16 ಎಂದು ಗುರುತಿಸಲಾಯಿತು. (ನಿಪಿ-8 ರಿಂದ 16 ನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ) ಭಾರತೀಯ ಸಾಕ್ಷ್ಯ ಅಧಿನಿಯಮ 1872 ಇದರ 65 ಬಿ ಪ್ರಮಾಣ ಪತ್ರವನ್ನು ನಿಪಿ- 17 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**